ಕರ್ನಾಟಕ ವಿಧಾನಸಭೆ

ಮಂಗಳವಾರ 20ನೇ ಫೆಬ್ರವರಿ 2007 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 11 48 ಗಂಟೆಗೆ ಸಮಾವೇಶಗೊಂಡಿತು

ಉಪಾಧ್ಯಕ್ಷರು (ಶ್ರೀ· ಎನ್ ವೈ ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

1 ಧರಣಿ

ಕಾಂಗ್ರೆಸ್ ಸದಸ್ಯರಿಂದ ಧರಣಿ

–ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರುಗಳು ಬಾವಿಯಲ್ಲಿದ್ದರು–

2 ಪ್ರಕಟಣೆ

(ಅ) ವಿಷಯ ಮಾನ್ಯ ಸದಸ್ಯರಾದ ಅಭಯ್‌ಪಾಟೀಲ್ ರವರನ್ನು ಹಲಗಾ ತಾರೀಹಾಳದಲ್ಲಿ ಫೇರಾವ್ ಮಾಡಿದಾಗ ಅವರನ್ನು ಬಂಧಿಸಿ ಬಿಡುಗಡೆ ಮಾಡಿರುವ ಬಗ್ಗೆ

ಉಪಾಧ್ಯಕ್ಷರು: ಈಗ ಪ್ರಕಟಣೆ

ಬೆಳಗಾವಿ ಜಿಲ್ಲಾ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿಯಲ್ಲಿ ದಿನಾಂಕ 17 02 2007 ರಂದು ಹಲಗಾ ತಾರೀಹಾಳ ರಸ್ತೆ ಸುಧಾರಣೆ ಮಾಡುವ ಕಾಮಗಾರಿ ಗುತ್ತಿಗೆ ಟೆಂಡರ್ ಪ್ರಕ್ರಿಯೆ ಸಂದರ್ಭದಲ್ಲಿ ಬಾಗೇವಾಡಿ ಕ್ಷೇತ್ರದ ಶಾಸಕರಾದ ಶ್ರೀ ಅಭಯ್ ಪಾಟೀಲ್ ಅವರು ಹಲಗಾ ತಾರೀಹಾಳ ಗ್ರಾಮಸ್ಥರ ಜೊತೆ ಬಂದು ಫೇರಾವ್ ಮಾಡಿದ ಹಿನ್ನೆಲೆಯಲ್ಲಿ ಪೊಲೀಸ್ ಕಾಯ್ದೆ ಕಲಂ 71 ರ ಪ್ರಕಾರ ಮಧ್ಯಾಹ್ನ 3 30 ಗಂಟೆಗೆ ವಶಕ್ಕೆ ತೆಗೆದುಕೊಂಡು ದಸ್ತಗಿರಿ ಮಾಡಿ ಸಂಜೆ 5 30 ಗಂಟೆಗೆ ಬಿಡುಗಡೆ ಮಾಡಲಾಯಿತೆಂದು ಬೆಳಗಾವಿ ಜಿಲ್ಲಾ ದಂಡಾಧಿಕಾರಿಗಳು ಹಾಗೂ ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಅವರುಗಳು ತಿಳಿಸಿರುತ್ತಾರೆಂದು ಸದನಕ್ಕೆ ತಿಳಿಸಲಿಚ್ಚಿಸುತ್ತೇನೆ

(ಆ) ಮಾನ್ಯ ಸದಸ್ಯರಾದ ಮೋಹನ ಕೆ ಶೆಟ್ಟಿಯವರು ಸದನಕ್ಕೆ ಗೈರುಹಾಜರಾಗಲು ಅನುಮತಿ

ವಿಧಾನಸಭಾ ಸದಸ್ಯರಾದ ಶ್ರೀ ಮೋಹನ ಕೆ ಶೆಟ್ಟಿ ಅವರು ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿರುವುದರಿಂದ ದಿನಾಂಕ 25 1 2007 ರಿಂದ 21 02 2007 ರ ವರೆಗೆ ಸದನಕ್ಕೆ ಗೈರುಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ಬರೆದಿರುತ್ತಾರೆ

ಮಾನ್ಯ ಸದಸ್ಯರು ಗೈರು ಹಾಜರಾಗಲು ಸದನದ ಸಹಮತಿ ಇದೆ ಎಂದು ಭಾವಿಸಲಾಗಿದೆ ಶ್ರೀ ಮೋಹನ ಕೆ ಶೆಟ್ಟಿ ಅವರು ಸದನಕ್ಕೆ ಗೈರುಹಾಜರಾಗಲು ಅನುಮತಿ ನೀಡಲಾಗಿದೆ

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಉಪಾಧ್ಯಕ್ಷರು – ಕಾಗದ ಪತ್ರಗಳನ್ನು ಮಂಡಿಸಲಾಯಿತು

4 ವರದಿಯನ್ನು ಒಪ್ಪಿಸುವುದು

ಶ್ರೀ ಎಂ ಪಿ ವೆಂಕಟೇಶ್. ಮಾನ್ಯ ಉಪಾಧ್ಯಕ್ಷರೆ, 2006–07ನೇ ಸಾಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಮೂರನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಉಪಾಧ್ಯಕ್ಷರು ಮಂಡಿಸಲಾಯಿತು

(ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಯಿಂದ ಘೋಷಣೆಗಳನ್ನು ಕೂಗುತ್ತಿದ್ದರು)

5 ನಿಯಮ 169 ಮೇರೆಗೆ ನಿರ್ಣಯ ಮಂಡನೆ

ಉಪಾಧ್ಯಕ್ಷರು ಈಗ ನಿಯಮ 169ರ ಮೇರೆಗೆ ನಿರ್ಣಯ ಮಂಡನೆ

(ಶ್ರೀ ಎನ್ ಧರ್ಮಸಿಂಗ್ ಅವರು ಬಾವಿಯಿಂದ ಮಾತನಾಡುತ್ತಿದ್ದರು, ಕಾಂಗ್ರೆಸ್ ಪಕ್ಷದ ಇತರ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ವೆಲ್‌ನಿಂದ ಮಾತನಾಡುವ ಹಾಗೆ ಇಲ್ಲ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್(ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ವಿಧಾನ ಸಭಾಧ್ಯಕ್ಷರ ವಿರುದ್ಧವಾಗಿ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿದ್ದಾರೆ

(ಗೊಂದಲ)